

# ಭಾವನಾಟಕದ ಪಾತ್ರಧಾರಿ ಶಾಮರ್

ವೆಸ್ಟ್‌ಇಂಡೀಸ್ ತಂಡ ಕಳೆದ ನಾಲ್ಕು ವರ್ಷಗಳಲ್ಲಿ ಎರಡು ಟೆಸ್ಟ್ ಪಂದ್ಯಗಳನ್ನಷ್ಟೇ ಗೆದ್ದಿತ್ತು. ಆಸ್ಟ್ರೇಲಿಯಾವನ್ನು ಸೋಲಿಸಿ ಎರಡು ದಶಕವಾಗಿತ್ತು. ಅಂತಹ ಕರಿನೆರಳಲ್ಲಿಯೂ ಗೆಲುವಿನ ಬೆಳಕು ಮೂಡಿಸಿದ ಶಾಮರ್ ಜೋಸೆಫ್ ವಿಂಡೀಸ್‌ನ ಗತ ಬೌಲಿಂಗ್ ವೈಭವವನ್ನು ನೆನಪಿಸಿದ್ದಾರೆ.

■ ವಿಶಾಖ ಎನ್.

ಬ್ರಯಾನ್ ಲಾರಾ ಕಣ್ಣಂಚಿನಲ್ಲಿ ನೀರು ಜಿನುಗಿತ್ತು. ಹಾರ್ಲ್ ಹೂಪರ್ ಇನ್ನೊಂದು ಕಡೆ ತಮ್ಮ ಬೃಹತ್ ದೇಹವನ್ನು ನಿಧಾನವಾಗಿ ಮೇಲಕ್ಕೆತ್ತುತ್ತಾ ನಿಂತಾಗ ಅವರೂ ಬೆರಳುಗಳಿಂದ ಕಣ್ಣೀರನ್ನು ಒರೆಸಿಕೊಂಡರು. ಎಂಟು ರನ್‌ಗಳಿಂದ ಆಸ್ಟ್ರೇಲಿಯಾದ ನೆಲದಲ್ಲಿ ವೆಸ್ಟ್‌ಇಂಡೀಸ್ ಟೆಸ್ಟ್ ಪಂದ್ಯವೊಂದನ್ನು ಗೆದ್ದ ಭಾವುಕ ಕ್ಷಣ ಅದು. ಕ್ರಿಕೆಟ್ಟನ್ನು ಆರಾಧಿಸುವ ಯಾರಿಗೇ ಆದರೂ ಕಣ್ಣಂಚಿನಲ್ಲಿ ನೀರು ಸಹಜವಾಗಿಯೇ ಜಿನುಗಿಸುವಂತಹ ಸಂದರ್ಭವೂ ಹೌದು. ಲಾರಾ ವೀಕ್ಷಕ ವಿವರಣೆ ನೀಡುತ್ತಿದ್ದರೆ, ಹೂಪರ್ ಗ್ರೀನ್ ರೂಮ್‌ನಲ್ಲಿ ಗೆಲುವಿಗಾಗಿ ಪ್ರಾರ್ಥಿಸುತ್ತಾ ಅವುಡುಗಚ್ಚಿ ಕುಳಿತಿದ್ದರು. ಶಾಮರ್ ಜೋಸೆಫ್ ಎಂಬ ಕಟ್ಟಾಳು ತಾನು ಆಡಿದ ಎರಡನೇ ಟೆಸ್ಟ್‌ನಲ್ಲೇ ಅಸಾಧ್ಯವೇನೋ ಎನ್ನುವಂತಿದ್ದ ಗೆಲುವನ್ನು ಜಿಗಿದು ಕಿತ್ತುಕೊಟ್ಟ ಪರಿಯ ಕುರಿತು ಒಂದು ಲಲಿತ ಪ್ರಬಂಧವನ್ನೇ ಬರೆಯಬಹುದು.

1999ರಲ್ಲಿ ಬ್ರಯಾನ್ ಲಾರಾ ಬಾರ್ಬಡೋಸ್‌ನಲ್ಲಿ ನಡೆದಿದ್ದ ಟೆಸ್ಟ್ ಪಂದ್ಯವೊಂದರಲ್ಲಿ ಆಸ್ಟ್ರೇಲಿಯಾ ಕೈಯಿಂದ ಗೆಲುವೊಂದನ್ನು ಕಿತ್ತುಕೊಂಡು ಬಂದದ್ದು ನೆನಪಾಗುತ್ತಿದೆ. ಗೆಲ್ಲಲು 308 ರನ್‌ಗಳ ಗುರಿ ಎದುರಲ್ಲಿ ಇತ್ತು. ಎರಡನೇ ಇನಿಂಗ್ಸ್‌ನಲ್ಲಿ 105 ರನ್‌ಗಳಿಗೆ ಐದು ವಿಕೆಟ್‌ಗಳನ್ನು ವಿಂಡೀಸ್ ಕಳೆದುಕೊಂಡು ಸಂಕಷ್ಟದಲ್ಲಿತ್ತು. 19 ಬೌಂಡರಿ, ಒಂದು ಸಿಕ್ಸರ್ ಸಿಡಿಸಿದ ಲಾರಾ 153 ರನ್ ಸೇರಿಸಿಕೊಟ್ಟರು. ಕೇವಲ ಒಂದು ವಿಕೆಟ್‌ನಿಂದ ವಿಂಡೀಸ್ ಆ ಪಂದ್ಯದಲ್ಲಿ ಗೆಲುವು ಸಾಧಿಸಿತ್ತು. ಕರ್ಟ್ನಿ ವಾಲ್ಶ್ ಅದೇ ಪಂದ್ಯದ ಎರಡನೇ ಇನಿಂಗ್ಸ್‌ನಲ್ಲಿ ಐದು ವಿಕೆಟ್ ಪಡೆದು, ಗೆಲುವಿನ ಸಾಧ್ಯತೆಯನ್ನು ತೆರೆದಿಟ್ಟಿದ್ದರು.

ಲಾರಾ ಕಣ್ಣಂಚಿನ ನೀರು, ಅವರನ್ನು ಆಸ್ಟ್ರೇಲಿಯಾದ ಗಿಲ್‌ಕ್ರಿಸ್ಟ್ ಅಪ್ಪಿ ಕ್ರಿಕೆಟ್ ಅನ್ನು ಗೆಲ್ಲಿಸಿದ್ದು, ಹಾರ್ಲ್ ಹೂಪರ್ ಗದ್ಗದಿತ ಕ್ಷಣಗಳ ವಿಡಿಯೊ, ದಕ್ಷಿಣ ಆಫ್ರಿಕಾ ಎಬಿ ಡಿವಿಲಿಯರ್ಸ್ ಆನಂದಬಾಷ್ಪ ಹೀಗೆ ಆಸ್ಟ್ರೇಲಿಯಾದ ಗಬ್ಬಾದಲ್ಲಿ ನಡೆದ ಟೆಸ್ಟ್ ಕ್ರಿಕೆಟ್ ಪಂದ್ಯವೊಂದು ಅದೆಷ್ಟೋ ಮನುಷ್ಯರನ್ನು ಭಾವುಕತೆಯಿಂದ ತೋಯಿಸಿಬಿಟ್ಟಿತು. ಶಾಮರ್ ಜೋಸೆಫ್ ಎಂಬ ಹೊಸ ಅಸ್ತ್ರ, ನಾಯಕ ಕ್ರೇಗ್ ಬ್ರಾಥ್‌ವೈಟ್ ಬತ್ತಳಿಕೆಯಲ್ಲಿತ್ತು. ಆ ಅಸ್ತ್ರದ ಬದುಕಿನ ಕಥೆ ಕೂಡ ಕಣ್ಣೀರು ತರಿಸುವಂಥದ್ದೇ.

ಗಯಾನಾದ ಕುಗ್ರಾಮ ಬರಾಕೆರಾ. ಮರ ಕಡಿದು ಬದುಕು ಸಾಗಿಸುವ ಅನಿವಾರ್ಯದ, ಬೆರಳೆಣಿಕೆಯಷ್ಟೇ ಜನರಿರುವ ಗ್ರಾಮ ಅದು. ಶಾಮರ್ ಜೋಸೆಫ್ ಅಲ್ಲಿನ ಕುಡಿ. ಒಮ್ಮೆ ಮರವೊಂದು ಬಹುತೇಕ ಶಾಮರ್ ಮೇಲೆಯೇ ಬಿತ್ತು. ಕೂದಲೆಳೆಯಲ್ಲಿ ಬಚಾವಾದರು. ಸ್ವಲ್ಪ ಅತ್ತಿತ್ತ ಆಗಿದ್ದಿದ್ದರೂ ಸಾವು ಖಚಿತ. ಆ ಹಳ್ಳಿಯಿಂದ ನ್ಯೂ ಆ್ಯಮ್‌ಸ್ಟರ್‌ಡ್ಯಾಮ್‌ಗೆ ಹಡಗಿನಲ್ಲೇ ಸಾಗಬೇಕು. ಶಾಮರ್ ಸಂಗಾತಿ ಆಗ ಗರ್ಭಿಣಿ. ಎರಡನೇ ಯೋಚನೆಯೇ ಇಲ್ಲದೆ ಅವರು ಒಳ್ಳೆಯ ಜೀವನ ಕಟ್ಟಿಕೊಳ್ಳಲೆಂದು ಹಡಗು ಹತ್ತಿದರು. 121 ಕಿ.ಮೀ. ಪಯಣ. ಆ್ಯಮ್‌ಸ್ಟರ್‌ಡ್ಯಾಮ್ ತಲುಪಿದ್ದಾಯಿತು. ಅಲ್ಲಿ ಕಟ್ಟಡ ಕಾರ್ಮಿಕನಾಗಿ ಕೆಲಸ ಮಾಡಿದರು. ಎತ್ತರದ ಪ್ರದೇಶಗಳಲ್ಲಿ ಕೆಲಸ ಮಾಡುವುದೆಂದರೆ ಶಾಮರ್‌ಗೆ ಭಯ. ಅವರಿಗೆ ಹೈಟ್ ಫೋಬಿಯಾ. ಅದಕ್ಕೇ ಆ ಕೆಲಸ ಬಿಟ್ಟು ಭದ್ರತಾ ಸಿಬ್ಬಂದಿಯಾದರು. ದಿನಕ್ಕೆ 12 ತಾಸು ಕೆಲಸ.

ಶಾಮರ್ ಚಿಕ್ಕಂದಿನಲ್ಲೇ ಕರ್ಟ್ನಿ ವಾಲ್ಶ್ ಹಾಗೂ ಆ್ಯಂಬ್ರೋಸ್ ಬೌಲಿಂಗ್ ಅನ್ನು ಟಿ.ವಿ.ಯಲ್ಲಿ ನೋಡಿ ಕಣ್ತುಂಬಿಕೊಂಡಿದ್ದರು. 2018ರವರೆಗೆ ಅವರಿದ್ದ ಕುಗ್ರಾಮಕ್ಕೆ ಇಂಟರ್ನೆಟ್ ಸಂಪರ್ಕವೇ ಇರಲಿಲ್ಲ. ಕೈಗೆ ಸಿಕ್ಕ ಹಣ್ಣುಗಳನ್ನು ಬೌಲಿಂಗ್ ಮಾಡುವಂತೆ ಎಸೆಯುತ್ತಿದ್ದರು. ಲಿಂಬೆ ಹಣ್ಣೋ, ಪೇರಲೆ ಹಣ್ಣೋ, ಯಾವುದಾದರೂ ಸರಿಯೇ. ಟೇಪ್‌ಗಳಿಂದ ಸುತ್ತಿ ಮಾಡಿದ ಚೆಂಡಿನಿಂದಲೂ ಬೌಲಿಂಗ್ ಮಾಡಿದ್ದಿದೆ.

ಈ ಹಿನ್ನೆಲೆ ಇದ್ದಿದ್ದರಿಂದ ಹಾಗೂ ತಾವು ಭದ್ರತಾ ಸಿಬ್ಬಂದಿಯಾಗಿದ್ದ ಸ್ಥಳದಲ್ಲಿಯೇ ರೊಮಾರಿಯೊ ಶೆಫರ್ಡ್ ಇದ್ದಿದ್ದರಿಂದ ಕ್ರಿಕೆಟ್‌ನ ಹೊಸ ಅಧ್ಯಾಯ ಶುರುವಾಯಿತು. 28 ಏಕದಿನ ಪಂದ್ಯಗಳನ್ನು ಆಡಿದ್ದ ರೊಮಾರಿಯೊ, ಶಾಮರ್ ಅವರನ್ನು ಗಯಾನಾ ಕ್ರಿಕೆಟ್ ತಂಡದ ಮುಖ್ಯ ಕೋಚ್ ಕ್ರ್ಯಾಂಡನ್ ಅವರಿಗೆ ಪರಿಚಯಿಸಿದರು. ಆ್ಯಂಬ್ರೋಸ್ ಬೌಲಿಂಗ್ ತರಬೇತಿ ಕೇಂದ್ರದಲ್ಲಿ ವೇಗದ ಸಾಣೆ ಸಿಕ್ಕಿತು. ಡಿವಿಷನ್ ಒನ್ ಕ್ರಿಕೆಟ್‌ನಲ್ಲಿ ಚೊಚ್ಚಲ ಪಂದ್ಯದಲ್ಲೇ 6 ವಿಕೆಟ್ ಕಿತ್ತರು. ಅಲ್ಲಿಂದ ಸಿಪಿಎಲ್, ಆಸ್ಟ್ರೇಲಿಯಾ ವಿರುದ್ಧ ಎರಡು ಟೆಸ್ಟ್ ಪಂದ್ಯಗಳಲ್ಲಿ ಅವಕಾಶ. ಎರಡನೇ ಟೆಸ್ಟ್‌ನಲ್ಲಿ ಕಾಲಿನ ಹೆಬ್ಬೆರಳಿನ ಮೂಳೆಗೆ ಪೆಟ್ಟಾಗಿ, ಸಣ್ಣ ಬಿರುಕು ಇತ್ತು. ಆ ನೋವಿನಲ್ಲೇ ಹತ್ತು ಓವರ್‌ಗಳ ಸ್ಪೆಲ್ ಮಾಡಿದ್ದು; ಅದೂ ಪ್ರತಿ ಗಂಟೆಗೆ 145 ಕಿ.ಮೀ. ವೇಗದ ಎಸೆತಗಳನ್ನು ಹಾಕಿದ್ದು ವಿಕ್ರಮವೇ ಸರಿ. ಆಸ್ಟ್ರೇಲಿಯಾದ ಏಳು ಬ್ಯಾಟ್ಸ್‌ಮನ್‌ಗಳನ್ನು ಅವರು ಪೆವಿಲಿಯನ್‌ಗೆ ಕಳುಹಿಸಿ, ಪಂದ್ಯ ಗೆಲ್ಲಿಸಿಕೊಟ್ಟರು. ಹಿಂದೆ ಅವರು ಕಿತ್ತಳೆ ಹಣ್ಣಿನಿಂದ ಬೌಲಿಂಗ್ ಮಾಡಿರಬಹುದು. ಆ ಪಂದ್ಯದಲ್ಲಿ ಕಿತ್ತಳೆ ಬಣ್ಣದ ಚೆಂಡು ಬಳಸಿ ಒಳಮುಖವಾಗಿ ನುಗ್ಗುವ, ಪ್ರಭಾವಿ ಯಾರ್ಕರ್‌ಗಳು ವಿಕೆಟ್ ಉದುರಿಸುವುದನ್ನು ಶಾಮರ್ ತೋರಿದ್ದು ಚಿತ್ತಾಪಹಾರಿ. ಎರಡು ದಶಕದ ನಂತರ ವಿಂಡೀಸ್‌ಗೆ ಇಂತಹ ಟೆಸ್ಟ್ ಗೆಲುವು ತಂದಿದ್ದ ಶಾಮರ್ ಈಗ ಕ್ರಿಕೆಟ್‌ನ ಭಾವನಾಟಕದ ಮುಖ್ಯಪಾತ್ರಧಾರಿ.

ಪ್ರತಿಕ್ರಿಯಿಸಿ: feedback@sudha.co.in